**ಪಾಠ–3** **ಜನವರಿ 11–17**

# ರಹಸ್ಯದಿಂದ ಪ್ರಕಟಣೆಗೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ದಾನಿ 2:1–16, ಅ.ಕೃ. 17:28, ದಾನಿ 2:17–49, ಕೀರ್ತನೆ 138, ಯೋಹಾನ 15:5; ಧ.ಕಾಂಡ 32:4 ಮತ್ತು 1 ಪೇತ್ರ 2:4.

**ಸ್ಮರಣವಾಕ್ಯ : "ದೇವರನಾಮಕ್ಕೆ ಯುಗಯುಗಾಂತರಗಳಲ್ಲಿಯೂ ಕೊಂಡಾಟವಾಗಲಿ! ಜ್ಞಾನತ್ರಾಣಗಳು ಆತನವೇ" (ದಾನಿಯೇಲ 2:20).**

ಗ್ರೀನ್‌ಲ್ಯಾಂಡನ್ನು ಸುತ್ತುವರೆದಿರುವ ನೀರಿನಲ್ಲಿ ವಿವಿಧ ಗಾತ್ರದ ಮಂಜುಗಡ್ಡೆಗಳಿವೆ ಸಣ್ಣ ಸಣ್ಣಗಡ್ಡೆಗಳು ಒಂದು ದಿಕ್ಕಿನಲ್ಲಿ ಚಲಿಸುತ್ತಿದ್ದರೆ ದೊಡ್ಡ ಗಾತ್ರದ ಮತ್ತೊಂದು ದಿಕ್ಕಿನಲ್ಲಿ ಚಲಿಸುತ್ತಾ ಇರುತ್ತವೆ. ಇದು ಹೀಗೆ ಆಗುವುದು ಏಕೆಂದರೆ ಸಣ್ಣಗಾತ್ರದ ಗಡ್ಡೆಗಳು ಮೇಲ್ಮೈ ಗಾಳಿಗೆ ನೂಕಲ್ಪಡುತ್ತದೆ, ದೊಡ್ಡವು ಆಳವಾದ ಸಾಗರ ಪ್ರವಾಹ ನೂಕಲ್ಪಡುತ್ತವೆ. ಚರಿತ್ರೆಯಾದ್ಯಂತ ರಾಷ್ಟ್ರಗಳ ಏಳು ಬೀಳುಗಳನ್ನು ಗಮನಿಸಿದರೆ ಇದು ಮೇಲ್ಮೈ ಮಾರುತಗಳು ಮತ್ತು ಸಮುದ್ರ ಪ್ರವಾಹಗಳು ವಹಿಸುವ ಪಾತ್ರಕ್ಕೆ ಹೋಲಿಸಬಹುದು ಮತ್ತು ಮನುಷ್ಯನ ಮನಸ್ಸಿನಂತೆ ಬದಲಾಗುವುದನ್ನೆಲ್ಲಾ ಮತ್ತು ಊಹಿಸಲಾಗದುದನ್ನೆಲ್ಲಾ ಬೀಸುವ ಗಾಳಿಗೆ ಹೋಲಿಸಬಹುದು. ಆದರೆ ಬೀಸುತ್ತಿರುವ ಬಿರುಗಾಳಿಯ ಜೊತೆ ಜೊತೆಗೆ ಕಾರ್ಯನಿರ್ವಹಿಸುತ್ತಿರುವ ಶಕ್ತಿ ಬೇರೊಂದಿದೆ ಇದು ಸಮುದ್ರ ಪ್ರವಾಹಗಳಂತೆ ಬಹಳ ಸಾಮರ್ಥ್ಯವುಳ್ಳದ್ದಾಗಿದೆ. ಇದುವೇ ದೇವರ ಜ್ಞಾನ ಮತ್ತು ಸಾರ್ವಭೌಮ

ಉದ್ದೇಶಗಳ ನಿಶ್ಚಿತ ಚಲನೆಯಾಗಿದೆ. ಎಲೆನ್ ಜಿ ವೈಟಮ್ಮನವರು ಹೇಳುವಂತೆ "ದೇವರ ಉದ್ದೇಶವು ನಕ್ಷತ್ರಗಳು ಅಗಾಧವಾದ ಆಕಾಶಮಂಡಲದಲ್ಲಿ ತಮಗೆ ನೇಮಿತವಾದ ಪಥದಲ್ಲಿ ಸಂಚರಿಸುವಂತೆ ಅವಸರ ಪಡುವುದೂ ಇಲ್ಲ ವಿಳಂಬ ಮಾಡುವುದೂ ಇಲ್ಲ" – ಡಿಸೈರ್ ಆಫ್ ಏಜಸ್, ಪುಟ 32. ರಾಷ್ಟ್ರಗಳ ಏಳು ಬೀಳುಗಳು (ಉನ್ನತಿ ಅವನತಿಗಳು), ಸಿದ್ಧಾಂತಗಳು ಮತ್ತೂ ರಾಜಕೀಯ ಪಕ್ಷಗಳು ಮನುಷ್ಯನ ಅಪೇಕ್ಷೆಯಂತೆ ಘಟಿಸುತ್ತವೆ ಎನಿಸಬಹುದು. ಆದರೆ ದಾನಿಯೇಲ 2ನೇ ಅಧ್ಯಾಯವು ಮನುಷ್ಯನ ಚರಿತ್ರೆಯನ್ನು ದೇವರೇ ಅಂತಿಮದೆಡೆಗೆ ತಳ್ಳುತ್ತಿದ್ದಾನೆಂದು ತೋರಿಸುತ್ತದೆ.

**ಭಾನುವಾರ** **ಜನವರಿ 12**

## ದೇವರ ವಿಶ್ವವ್ಯಾಪಕತೆ

ಓದಿರಿ : ದಾನಿಯೇಲ 2:1–16 ದೇವರು ಕೊಟ್ಟ ಕನಸಿನಿಂದ ಯಹೂದಿ ಯೌವನಸ್ಥರು ಯಾವ ಬಿಕ್ಕಟ್ಟನ್ನು ಎದುರಿಸಿದರು?

ಪುರಾತನ ಕಾಲದಲ್ಲಿ ಕನಸುಗಳನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತಿದ್ದರು. ಕನಸು ಮುನ್ಸೂಚಕವಾಗಿದ್ದರೆ ಅದು ಸನ್ನಿತವಾಗಿ ಸಂಭವಿಸಲಿರುವ ಆಪತ್ತನ್ನು ಸೂಚಿಸುತ್ತದೆ. ಹಾಗಾಗಿ ನೆಬೂಕದ್ನೆಚ್ಚರನು ಕನಸಿನ ವಿಷಯವಾಗಿ ಏಕೆ ಅಷ್ಟೊಂದು ಆತಂಕಪಟ್ಟನು ಮತ್ತು ಕಂಡ ಕನಸೇ ಮರೆತು ಹೋದಾಗ ಅವನಿಗೆ ಇನ್ನೂ ಹೆಚ್ಚಿನ ಆತಂಕವಾಯ್ತು ಎಂಬುದು ಅರ್ಥವಾಗುತ್ತದೆ. ಬ್ಯಾಬಿಲೋನಿನ ಪಂಡಿತರು ದೇವರು ಮಾತ್ರ ಕನಸಿನ ಅರ್ಥವನ್ನು ತಿಳಿಸುತ್ತಾನೆಂದು ನಂಬಿದ್ದರು. ಆದರೆ ದಾನಿಯೇಲನ ಪುಸ್ತಕದಲ್ಲಿರುವ ಈ ಕನಸಿನ ವಿಷಯದಲ್ಲಿ ಪಂಡಿತರು ಏನು ಮಾಡಲಾಗದವರಾಗಿದ್ದರು. ಯಾಕೆಂದರೆ ರಾಜನು ತಾನು ಕಂಡ ಕನಸನ್ನು ಮರೆತುಕೊಂಡಿದ್ದನು. ರಾಜನ ಕನಸನ್ನು ಪಂಡಿತರಿಗೆ ಹೇಳಿದ್ದರೆ ಅವರು ರಾಜನಿಗೆ ಅದರ ಅರ್ಥವನ್ನು ಹೇಳುತ್ತಿದ್ದರು. ಆದರೆ ಎಂದೂ ಉಂಟಾಗದ ಸಂದರ್ಭ ಒದಗಿರುವಾಗ ಅವರು ರಾಜನಿಗೆ " ರಾಜನು ಕೇಳುವ ಸಂಗತಿಯು ಅತಿ ಕಷ್ಟವಾದುದು; ನರಜನ್ಮದವರ ಮಧ್ಯೆ ವಾಸಿಸುವ ದೇವರುಗಳೇ ಹೊರತು ಇನ್ನಾರೂ ರಾಜನ ಸಮ್ಮುಖದಲ್ಲಿ ತಿಳಿಸಲಾರರು ಎಂದು ಉತ್ತರ ಕೊಟ್ಟರು" (ದಾನಿಯೇಲ 2:11).

ರಾಜನು ಹತಾಶೆಯಿಂದ ತನ್ನ ಸಂಸ್ಥಾನದ ಎಲ್ಲಾ ಪಂಡಿತರನ್ನು ಕೊಲ್ಲುವುದಕ್ಕೆ ಆಜ್ಞೆ ಮಾಡಿದನು. ಅಂತಹ ದೌರ್ಜನ್ಯವು ಪುರಾತನ ಕಾಲದವರಿಗೆ ತಿಳಿಯದುದಾಗಿರಲಿಲ್ಲ. ಚಾರಿತ್ರಿಕ ಮೂಲಗಳು ಒಂದನೇ ದಾರ್ಯವೆಷನು ಪಿತೂರಿಯ ನಿಮಿತ್ತ ಎಲ್ಲಾ ಜೋಯಿಸರನ್ನು ಕೊಲ್ಲಿಸಿದ್ದನು ಮತ್ತು ರಾಜನಾದ ಕುರೇಷನು ಕಟ್ಟಿಸಿದ ಸೇತುವೆ ಕುಸಿದು ಹೋದ್ದರಿಂದ ಅದನ್ನು ಕಟ್ಟಿದ ವಾಸ್ತು ಶಿಲ್ಪಿಗಳನ್ನು ಕೊಲ್ಲಿಸಿದ್ದನ್ನು ದೃಢೀಕರಿಸುತ್ತದೆ. ನೆಬೂಕದ್ನೆಚ್ಚರನು ಈ ಆದೇಶವನ್ನು ಹೊರಡಿಸಿದಾಗ ದಾನಿಯೇಲ ಮತ್ತು ಆತನ ಸ್ನೇಹಿತರು ಆಗತಾನೆ ತರಬೇತನ್ನು ಮುಗಿಸಿಕೊಂಡು ಬಂದಿದ್ದರು ಮತ್ತು ಆಗತಾನೆ ಪಂಡಿತರ ಸಮೂಹಕ್ಕೆ ಸೇರಿದವರಾಗಿದ್ದರು, ಆ ಕಾರಣದಿಂದ ರಾಜನು ಹೊರಡಿಸಿದ ಆದೇಶವು ಇವರಿಗೂ ಅನ್ವಯವಾಗುತ್ತಿತ್ತು. ಆಗಲೇ ಕೊಲ್ಲುವುದು ಶುರುವಾಗಿ ಹೋಗಿತ್ತೆಂದು ಮೂಲಭಾಷೆಯು ಹೇಳುತ್ತದೆ. ದಾನಿಯೇಲ ಮತ್ತು ಆತನ ಸಂಗಡಿಗರ ಕೊಲೆ ನಂತರ ನಡೆಯುವುದಕ್ಕಿತ್ತು. ಆದರೆ ದಾನಿಯೇಲನು ಜ್ಞಾನದಿಂದಲೂ ಸಲಹೆಯಿಂದಲೂ ಅರ್ಯೋಕನು ಬಳಿಗೆ ಹೋದನು ಅರಿಯೋಕನಿಗೆ ಅವರನ್ನು ಕೊಲೆ ಮಾಡುವ ಆದೇಶವಾಗಿತ್ತು (ದಾನಿ 2:14). ಅಂತಿಮವಾಗಿ ದಾನಿಯೇಲನು ರಾಜನ ಹತ್ತಿರಕ್ಕೆ ಹೋಗಿ ಸಮಸ್ಯೆ ಪರಿಹಾರಕ್ಕಾಗಿ ಸಮಯ ತೆಗೆದುಕೊಂಡನು. ಮಂತ್ರವಾದಿಗಳು ಸುಮ್ಮನೆ ಕಾಲ ಕಳೆಯುತ್ತಿದ್ದಾರೆಂದು ಆರೋಪಿಸಿದಾಗ್ಯೂ ರಾಜನು ದಾನಿಯೇಲನಿಗೆ ಸಮಯಕೊಟ್ಟದ್ದು ಆಸಕ್ತಿಕರವಾಗಿದೆ.

ಖಂಡಿತವಾಗಿಯೂ ಮನುಷ್ಯರಾದವರು ಅಂತಹ ರಹಸ್ಯವನ್ನು ತಿಳಿಸಲಾರರು ಎಂದು ಬ್ಯಾಬಿಲೋನಿನ ಜೋಯಿಸರು ಹೇಳಿದ ಮಾತನ್ನು ದಾನಿಯೇಲನು ಒಪ್ಪಿಕೊಂಡನು ಮತ್ತು ದೇವರು ಮಾತ್ರ ಕನಸನ್ನು ಅದರ ಅರ್ಥವನ್ನು ತಿಳಿಸುತ್ತಾನೆ ಎಂಬುದು ಆತನಿಗೆ ಗೊತ್ತಿತ್ತು.

ದೇವರು ತಾನು ಮಾಡಿದ ಸೃಷ್ಟಿಗಿಂತ ವಿಭಿನ್ನನಾಗಿದ್ದಾಗ್ಯೂ ಸೃಷ್ಟಿಗೆ ಹತ್ತಿರವಾಗಿರುತ್ತಾನೆಂದು ತತ್ವಶಾಸ್ತ್ರಜ್ಞರು ಆತನ ಸರ್ವವ್ಯಾಪಕತ್ವದ ಬಗ್ಗೆ ಮಾತಾಡುತ್ತಾರೆ. ದೇವರು ತಾನು ಹೇಗೆ ಸರ್ವವ್ಯಾಪಿ ಎಂಬುದಕ್ಕೆ ನೆಬುಕದ್ನೆಚ್ಚರನಿಗೆ ಕೊಟ್ಟ ಕನಸು ನಮಗೆ ಯಾವ ಸತ್ಯವನ್ನು ತಿಳಿಸುತ್ತದೆ?

# ಪ್ರಾರ್ಥನೆ

ದೇವರು ಕನಸನ್ನು ತಿಳಿಯಪಡಿಸದೆ ಹೋದರೆ ನಾವು ಕೂಡ ಸಾಯಬೇಕಾಗುತ್ತದೆಂದು ದಾನಿಯೇಲನು ಕೂಡಲೇ ಸ್ನೇಹಿತರನ್ನು ಜೊತೆಗೆ ಕರೆದುಕೊಂಡು ದೇವರಿಗೆ ಪ್ರಾರ್ಥಿಸಿದನು. ನಾವು ಸಹ ದೊಡ್ಡ ಸಮಸ್ಯೆಗಳನ್ನು ಎದುರಿಸುವಾಗಲೆಲ್ಲಾ ನಮ್ಮ ದೇವರು ಬಗೆಹರಿಸಲಾಗದುದನ್ನು ಬಗೆ ಹರಿಸಬಲ್ಲನೆಂದು ಅರಿಯಬೇಕು.

ಓದಿರಿ : ದಾನಿಯೇಲ 2:17–23 ಇಲ್ಲಿರುವ ಎರಡು ಬಗೆಯ ಪ್ರಾರ್ಥನೆಗಳಾವುವು?

ಈ ಅಧ್ಯಾಯದಲ್ಲಿ ಎರಡು ವಿಧದ ಪ್ರಾರ್ಥನೆಗಳಿವೆ. ಮೊದಲನೆಯದು ಮನವಿ ಪ್ರಾರ್ಥನೆ. ಇದರಲ್ಲಿ ದಾನಿಯೇಲನು ದೇವರಿಗೆ ಕನಸನ್ನೂ ಅದರ ಅರ್ಥವನ್ನೂ ತಿಳಿಸಬೇಕೆಂದು (ಪ್ರಕಟಿಸಬೇಕೆಂದು) ಪ್ರಾರ್ಥಿಸುತ್ತಾನೆ (ದಾನಿ 2:17–19). ಈ ಪ್ರಾರ್ಥನೆಯ ಪ್ರತೀ ಪದಗಳು ಕೊಡಲ್ಪಟ್ಟಿಲ್ಲ. ಆದರೆ ದಾನಿಯೇಲನು ಮತ್ತು ಆತನ ಸ್ನೇಹಿತರು ಬ್ಯಾಬಿಲೋನಿನ ಇತರೆ ವಿದ್ವಾಂಸರೊಡನೆ ನಾಶವಾಗಬಾರದೆಂದು ಕನಸಿನ ರಹಸ್ಯವನ್ನು ತಿಳಿಸಿಕೊಡುವಂತೆ ದೇವರ ಕರುಣೆಗಾಗಿ ಪ್ರಾರ್ಥಿಸಿದರೆಂದು ನಮಗೆ ತಿಳಿಸಲ್ಪಟ್ಟಿದೆ (ದಾನಿ 2:18).

ಅವರು ಪ್ರಾರ್ಥಿಸಿದಾಗ ದೇವರು ಅವರಿಗೆ ಉತ್ತರವನ್ನು ಕೊಟ್ಟನು, ರಾಜನ ಕನಸನ್ನೂ ಅದರ ಅರ್ಥವನ್ನೂ ಪ್ರಕಟಿಸಿದನು. ನಾವು ಸದಾ ಪರಲೋಕ ದೇವರ ಕರುಣೆಗಾಗಿ ಪ್ರಾರ್ಥಿಸಿದಾಗಲೆಲ್ಲಾ ಆತನು ನಮ್ಮ ಪ್ರಾರ್ಥನೆಯನ್ನು ಲಾಲಿಸುತ್ತಾನೆಂದು ಭರವಸೆ ಇಡಬಹುದು, ಯಾಕೆಂದರೆ ದಾನಿಯೇಲನ ದೇವರು ನಮಗೂ ಸಹಾ ದೇವರಾಗಿದ್ದಾನೆ.

ದೇವರು ಅವರ ಪ್ರಾರ್ಥನೆಗೆ ಉತ್ತರ ಕೊಟ್ಟಾಗ ಅವರು ಕೃತಜ್ಞತೆ ಮತ್ತು ಸ್ತುತಿಭರಿತ ಪ್ರಾರ್ಥನೆಯನ್ನು ಸಲ್ಲಿಸತೊಡಗಿದರು. ದೇವರು ಎಲ್ಲಾ ಜ್ಞಾನಗಳ ಮೂಲನಾಗಿರುವುದರಿಂದ ಪ್ರಕೃತಿಯನ್ನೂ ಮತ್ತು ಲೋಕದ ಚರಿತ್ರೆಯನ್ನೂ ನಿಯಂತ್ರಿಸುವವನಾಗಿರುವುದರಿಂದ ಆತನಿಗೆ ಸ್ತುತಿ ಸಲ್ಲಿಸತೊಡಗಿದರು. ಇಲ್ಲಿ

ನಾವು ಒಂದು ಮುಖ್ಯವಾದ ಪಾಠವನ್ನು ಕಲಿಯಬಹುದು. ನಾವು ದೇವರಿಗೆ ಮೊರೆಯಿಟ್ಟು ಪ್ರಾರ್ಥಿಸಿದಾಗ ಆತನು ಕೊಟ್ಟ ಉತ್ತರಕ್ಕೆ ಕೃತಜ್ಞತೆಯಿಂದ ಎಷ್ಟು ಸಲ ಸ್ತುಸಿತುತ್ತೇವೆ? ಯೇಸುಕ್ರಿಸ್ತನು ಹತ್ತುಮಂದಿಯನ್ನು ಗುಣಪಡಿಸಿದಾಗ ಕೇವಲ ಒಬ್ಬನು ಮಾತ್ರ ಹಿಂದಿರುಗಿ ಬಂದು ಕೃತಜ್ಞತೆಯನ್ನು ಸಲ್ಲಿಸಿದನು. ಉಳಿದ ಒಂಭತ್ತು ಮಂದಿ ಹಿಂದಿರುಗಿ ಬರದೆ ಕೃತಘ್ನರಾದ ನಿದರ್ಶವನ್ನು (ಲೂಕ 17:18) ನೋಡುತ್ತೇವೆ. ದಾನಿಯೇಲನ ಸ್ಪಂದನೆಯು ಕೃತಜ್ಞತೆ ಮತ್ತು ಸ್ತುತಿಯ ಪ್ರಾಮುಖ್ಯತೆಯ ಬಗ್ಗೆ ಮಾತ್ರವಲ್ಲದೆ ದೇವರ ಗುಣವನ್ನೂ ಸಹಾ ತಿಳಿಸುತ್ತದೆ. ನಾವು ಪ್ರಾರ್ಥಿಸಿದಾಗಲೆಲ್ಲ ದೇವರು ನಮಗೆ ಉತ್ತಮವಾದುದನ್ನೇ ಮಾಡುತ್ತಾನೆಂದು ಭರವಸೆಯಿಟ್ಟು ಆತನಿಗೆ ಕೃತಜ್ಞರಾಗಿ ಸ್ತುತಿಸುವವರಾಗಿರಬೇಕು.

ಕೀರ್ತನೆ 138ನ್ನು ಓದಿರಿ. ನೀವು ಯಾವುದೇ ಸಂದರ್ಭದಲ್ಲಿದ್ದರೂ ಸರಿಯೆ ದೇವರಿಗೆ ಕೃತಜ್ಞರಾಗುವಂತೆ ಈ ಪ್ರಾರ್ಥನೆಯಿಂದ ನೀವು ಏನನ್ನು ತೆಗೆದುಕೊಳ್ಳುವಿರಿ?

**ಮಂಗಳವಾರ** **ಜನವರಿ 14**

## ಪ್ರತಿಮೆ : ಭಾಗ–1

ದಾನಿಯೇಲ 2:24–30. ನಾವು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಳ್ಳುವಷ್ಟು ಪ್ರಾಮುಖ್ಯವಾದದೇನನ್ನು ದಾನಿಯೇಲನು ಹೇಳುತ್ತಾನೆ? (ಯೋಹಾನ 15:5ನ್ನೂ ಸಹಾ ನೋಡಿರಿ).

ಪ್ರಾರ್ಥನೆಗೆ ಉತ್ತರವಾಗಿ ದೇವರು ಕನಸನ್ನೂ ಅದರ ಅರ್ಥವನ್ನೂ ಪ್ರಕಟಿಸುತ್ತಾನೆ. ರಹಸ್ಯವಾದವುಗಳಿಗೆ ಪರಲೋಕ ದೇವರು ಮಾತ್ರ ಪರಿಹರವನ್ನು ಕೊಡುತ್ತಾನೆಂದು ರಾಜನಿಗೆ ಹೇಳುವುದಕ್ಕೆ ದಾನಿಯೇಲನು ಹಿಂಜರಿಯಲಿಲ್ಲ. ಕನಸನ್ನೂ ಅದರ ಅರ್ಥವನ್ನೂ ಹೇಳುವ ಮೊದಲು ಆ ರಾತ್ರಿ ರಾಜನಿಗೆ ಹಾಸಿಗೆಯ ಮೇಲೆ ನಿದ್ದೆಗೆಡಿಸಿದ ಯೋಚನೆಗಳ ಬಗ್ಗೆಯೂ ದಾನಿಯೇಲನು ಹೇಳುತ್ತಾನೆ. ರಾಜನಿಗೆ ಕನಸು ಬೀಳುವ ಸನ್ನಿವೇಶದ ಮಾಹಿತಿಯು ಅದರ ಸಂದೇಶದ ವಿಶ್ವಾಸಾರ್ಹತೆಯ ಮೇಲೆ ಇನ್ನೂ ಹೆಚ್ಚಿನ ಒತ್ತು ನೀಡುತ್ತದೆ. ಯಾಕೆಂದರೆ ಆ ರಾತ್ರಿ ರಾಜನಿಗಾದ ಅನುಭವ ಏನೆಂದು ಯಾರಿಗೂ ಗೊತ್ತಿರಲಿಲ್ಲ.

ರಾಜನಿಗೆ ಮಾತ್ರ ಗೊತ್ತಿದ್ದು ದಾನಿಯೇಲನಿಗೆ ದೇವರ ಮೂಲಕ ಗೊತ್ತಾಯ್ತು. ಕನಸನ್ನೂ ಅದರ ಅರ್ಥವನ್ನೂ ಹೇಳುತ್ತಿದ್ದಂತೆಯೇ ನೆಬೂಕದ್ನೆಚ್ಚರನಿಗೆ ಅದು ಒಳ್ಳೇ ಸುದ್ದಿಯಾಗಿಲ್ಲದಿರುವುದು ದಾನಿಯೇಲನಿಗೆ ಬಿಕ್ಕಟ್ಟಿನ ಸಂದರ್ಭ ಒದಗುವ ಅಪಾಯವಿತ್ತು.

ಓದಿರಿ : ದಾನಿಯೇಲ 2:31–49. ನೆಬೂಕದ್ನೆಚ್ಚರನ ರಾಜ್ಯದ ಗತಿಯ ಬಗ್ಗೆ ಕನಸು ಏನು ಹೇಳುತ್ತದೆ? ಚಿನ್ನದ ತಲೆ, ಬೆಳ್ಳಿಯ ಎದೆ ಮತ್ತು ಭುಜಗಳು, ಕಂಚಿನ ಹೊಟ್ಟೆ ಮತ್ತು ತೊಡೆಗಳು, ತಾಂಡುವಾಳದ (ಕಬ್ಬಿಣ ಮತ್ತು ಜೇಡಿಮಣ್ಣು) ಪಾದ ಮತ್ತು ಬೆರಳುಗಳನ್ನು ಅದ್ಭುತವಾದ ಪ್ರತಿಮೆಯು ಹೊಂದಿತ್ತು (ದಾನಿ 2:32,33). ಘಟನಾಂತ್ಯದಲ್ಲಿ ಬೆಟ್ಟದೊಳಗಿಂದ ಒಂದು ಗುಂಡು ಬಂಡೆಯು ಕೈಯಿಲ್ಲದೆ ಒಡೆಯಲ್ಪಟ್ಟು ಸಿಡಿದು ಬಂದು ತಾಂಡುವಾಳದ ಪಾದಗಳಿಗೆ ಬಡಿದು ಚೂರುಚೂರು ಮಾಡಿತು (ದಾನಿ 2:34). ಇಡೀ ಪ್ರತಿಮೆಯು ಒಡೆಯಲ್ಪಟ್ಟು ಪುಡಿಪುಡಿಯಾಗಿ ಸುಗ್ಗಿಯ ಕಣದ ಹೊಟ್ಟಿನಂತಾಯಿತು. ಚರಿತ್ರೆಯಾದ್ಯಂತ ಒಂದರ ಮೇಲೊಂದು ಬರುವ ರಾಜ್ಯಗಳನ್ನು ವಿವಿಧ ಲೋಹಗಳು ಪ್ರತಿನಿಧಿಸುತ್ತದೆ ಎಂದು ದಾನಿಯೇಲನು ವಿವರಿಸುತ್ತಾನೆ.

ಬಲ ಪರಾಕ್ರಮ ಮತ್ತು ಮಹಿಮೆಯಿಂದ ಕೂಡಿದ ಬ್ಯಾಬಿಲೋನ್ ರಾಜ್ಯವು ಅವನತಿ ಹೊಂದುತ್ತದೆ ಮತ್ತು ಅದರ ಜಾಗದಲ್ಲಿ ಮತ್ತೊಂದು ರಾಜ್ಯವು ತಲೆಯೆತ್ತುತ್ತದೆ ಎಂಬ ಸಂದೇಶವನ್ನು ನೆಬೂಕದ್ನೆಚ್ಚರನು ಸ್ಪಷ್ಟವಾಗಿ ತಿಳಿದುಕೊಂಡನು.

ಮಾನವನ ಎಲ್ಲಾ ವಸ್ತುಗಳು ಹೇಗೆ ಕ್ಷಣಿಕವಾದವುಗಳು ಮತ್ತು ತಾತ್ಕಾಲಿಕವಾದವುಗಳೆಂದು ನೋಡಿರಿ. ಕ್ರಿಸ್ತನಲ್ಲಿ ಮಾತ್ರ ನಮಗಿರುವ ಮಹಾನಿರೀಕ್ಷೆಯ ಬಗ್ಗೆ ಈ ಸಂಗತಿಯು ನಮಗೆ ಏನನ್ನು ಬೋಧಿಸುತ್ತದೆ? (ಯೋಹಾನ 6:54 ಮತ್ತು 2 ಕೊರಿಂಥ 4:18ನ್ನು ನೋಡಿರಿ).

**ಬುಧವಾರ** **ಜನವರಿ 15**

## ಪ್ರತಿಮೆ : ಭಾಗ–2

ಕನಸು ಮತ್ತು ಅದರ ಅರ್ಥವನ್ನು ಮತ್ತೆ ಓದಿರಿ (ದಾನಿ 2:31–49).

ದೇವರು ಹೊಂದಿರುವ ಲೋಕದ ಚರಿತ್ರೆಯ ಭವಿಷ್ಯದ್ ಜ್ಞಾನದ ಬಗ್ಗೆ ಇದು ಏನನ್ನು ಬೋಧಿಸುತ್ತದೆ?

ನೆಬೂಕದ್ನೆಚ್ಚರನ ಕನಸಿನ ಮೂಲಕ ತಲುಪಿರುವ ಪ್ರವಾದನೆಯ ಸಾಮಾನ್ಯ ಪ್ರವಾದನೆಯ ಸ್ವರೂಪವನ್ನು ಮತ್ತು ಕಾರ್ಯಗಳನ್ನು ನೀಡುತ್ತದೆ. ಹೆಚ್ಚು ವಿವರಣೆಯುಳ್ಳ ದಾನಿಯೇಲ 7,8 ಮತ್ತು 11ನೇ ಅಧ್ಯಾಯಗಳ ಪ್ರವಾದನೆಗಳಿಗೆ ಮಾನದಂಡದಂತೆ ವರ್ತಿಸುತ್ತದೆ. ದಾನಿಯೇಲ 2ನೇ ಅಧ್ಯಾಯದಲ್ಲಿರುವುದು ನಿಬಂಧನೆ ಸಹಿತವಾದ ಪ್ರವಾದನೆಯಲ್ಲ. ಇದು ಒಂದು ಸರ್ವನಾಶದ ಪ್ರವಾದನೆ, ಮುಂದೆ ನಡೆಯುವುದರ ಬಗ್ಗೆ ದೇವರು ಖಂಡಿತವಾಗಿ ನುಡಿದಿರುವ ಭವಿಷ್ಯ ಇದಾಗಿದೆ.

1. ಬಂಗಾರದ ತಲೆಯು ಬ್ಯಾಬಿಲೋನನ್ನು ಪ್ರತಿನಿಧಿಸುತ್ತದೆ (ಕ್ರಿ.ಪೂ. 626–539). ಬ್ಯಾಬಿಲೋನಿನ ಅಧಿಕಾರ ಮತ್ತು ಸಂಪತ್ತನ್ನು ಬಂಗಾರಕ್ಕಿಂತ ಮತ್ಯಾವ ಲೋಹವು ಸೂಕ್ತವಾಗಿ ಪ್ರತಿನಿಧಿಸಲಾರದು. ಸತ್ಯವೇದವು ಇದನ್ನು ಬಂಗಾರದ ಪಟ್ಟಣವೆಂದು ಕರೆಯುತ್ತದೆ (ಯೆಶಾಯ 14:4) ಮತ್ತು ದೇವರ ಕೈಯಲ್ಲಿರುವ ಬಂಗಾರದ ಪಾತ್ರೆಯೆಂದು ಕರೆಯುತ್ತದೆ (ಯೆರೆ 51:7ನ್ನು ಪ್ರಕಟಣೆ 18:16ಎರ ಜೊತೆ ಹೋಲಿಸಿರಿ). ಪುರಾತನ ಚರಿತ್ರೆಗಾರನಾದ ಹೆರೋಡೋಟಿಸ್ಸನು ಹೇರಳವಾದ ಬಂಗಾರದಿಂದ ಪಟ್ಟಣವು ಶೃಂಗರಿಸಲ್ಪಟ್ಟಿತೆಂದು ವರದಿ ಮಾಡಿದ್ದಾನೆ.
2. ಬೆಳ್ಳಿಯ ಎದೆ ಮತ್ತು ತೋಳುಗಳು ಮೇದ್ಯ ಪಾರಸೀಯವನ್ನು ಪ್ರತಿನಿಧಿಸುತ್ತದೆ (ಕ್ರಿ.ಪೂ. 539–331). ಬೆಳ್ಳಿಯು ಬಂಗಾರಕ್ಕಿಂತ ಕಡಿಮೆ ಮೌಲ್ಯದ್ದಾಗಿರುವಂತೆ ಮೇದ್ಯ ಪಾರಸಿಯ ಸಾಮ್ರಾಜ್ಯಕ್ಕೆ ಬ್ಯಾಬಿಲೋನಿನ ವೈಭವವನ್ನು ಎಂದಿಗೂ ತಲುಪಲಾಗಲಿಲ್ಲ. ಅಲ್ಲದೆ ಮೇದ್ಯ ಪಾರಸಿಯರು ತೆರಿಗೆಗೆ ಬೆಳ್ಳಿ ಲೋಹವನ್ನು ಬಳಸುತ್ತಿದ್ದುದರಿಂದ ಬೆಳ್ಳಿಯು ಇದಕ್ಕೆ ಸೂಕ್ತವಾದ ಸಂಕೇತವಾಗಿದೆ.
3. ತಾಮ್ರದ ಹೊಟ್ಟೆ ಮತ್ತು ಸೊಂಟವು ಗ್ರೀಕ್ ಸಾಮ್ರಾಜ್ಯವನ್ನು ಸಂಕೇತಿಸುತ್ತದೆ (ಕ್ರಿ.ಪು. 331–168). ಯೆಹೆ 27:13 ನೇ ವಚನವು ಗ್ರೀಕರು ತಾಮ್ರದ

ಪಾತ್ರೆಗಳನ್ನು ತಮ್ಮ ವ್ಯಾಪಾರಕ್ಕೆ ಉಪಯೋಗಿಸಿದರು ಎಂಬುದನ್ನು ವಿವರಿಸುತ್ತದೆ. ಗ್ರೀಕ್ ಸೈನಿಕರು ತಾಮ್ರದ ಯುದ್ಧಕವಚಗಳನ್ನು ಉಪಯೋಗಿಸುವುದಕ್ಕೆ ಹೆಸರಾಗಿದ್ದರು ಅವರ ಶಿರಸ್ತ್ರಾಣಗಳು ಗುರಾಣಿಗಳು ಮತ್ತು ಆಯುಧಗಳು ಕಂಚಿನದವುಗಳಾಗಿದ್ದವು (ತಾಮ್ರ ಮತ್ತು ತವರಗಳ ಮಿಶ್ರ ಲೋಹವನ್ನು ಕಂಚು ಎಂದು ಕರೆಯುತ್ತೇವೆ). ಐಗುಪ್ತದ ಅರಸನಾದ ಒಂದನೇ ಸಮ್ಮೇಟಿಕಸ್ಸನು ಗ್ರೀಕ್ ಕಡಲ್ಗಳ್ಳರು ದಂಡೆತ್ತಿ ಬರುವುದನ್ನು ನೋಡಿದಾಗ "ತಾಮ್ರದ ಮನುಷ್ಯರು ಸಮುದ್ರದಿಂದ ಬರುತ್ತಾರೆಂಬ" ದೈವವಾಣಿ ನುಡಿದ ಭವಿಷ್ಯವು ನೆರವೇರಿತೆಂದು ಹೆರೋಡಾಟನು ಹೇಳುತ್ತಾನೆ.

4. ಕಬ್ಬಿಣದ ಕಾಲುಗಳು ರೋಮ್ ಸಾಮ್ರಾಜ್ಯವನ್ನು ಸಮಂಜಸವಾಗಿ ಪ್ರತಿನಿಧಿಸುತ್ತವೆ (ಕ್ರಿ.ಪೂ. 168–ಕ್ರಿ.ಶ. 476). ಹಿಂದಿನ ಸಾಮ್ರಾಜ್ಯಗಳಿಗಿಂತ ದೀರ್ಘವಾಗಿ ಆಳಿದ ಸದೆಬಡಿವ ರೋಮ್ ಸಾಮ್ರಾಜ್ಯದ ಅಧಿಕಾರವನ್ನು ಪ್ರತಿನಿಧಿಸಲು ಕಬ್ಬಿಣವು ಪರಿಪೂರ್ಣವಾದ ಲೋಹವಾಗಿದೆ.

5. ಒಂದು ಭಾಗ ಕಬ್ಬಿಣ ಮತ್ತು ಒಂದು ಭಾಗ ಮಣ್ಣಿನ ಪಾದಗಳು ವಿಭಜಿತ ಯೂರೋಪನ್ನು ಪ್ರತಿನಿಧಿಸುತ್ತದೆ (ಕ್ರಿ.ಶ. 476 ರಿಂದ ಕ್ರಿಸ್ತನ ಎರಡನೇ ಆಗಮನದವರೆಗೆ). ಕಬ್ಬಿಣ ಮತ್ತು ಮಣ್ಣಿನ ಮಿಶ್ರಣವು ಛಿದ್ರವಾದ ರೋಮ್ ಸಾಮ್ರಾಜ್ಯದ ಸೂಕ್ತ ಚಿತ್ರವನ್ನು ನೀಡುತ್ತದೆ. ಒಡೆದು ಹೋದ ಯೂರೋಪಿನ ರಾಷ್ಟ್ರಗಳನ್ನು ಒಂದು ಮಾಡುವ ಅಂದಿನ ಮನೆತನದ ಮದುವೆಗಳಿಂದ ಇಂದಿನ ಯೂರೋಪ್ ಒಕ್ಕೂಟದವರೆಗೆ ಅನೇಕ ಪ್ರಯತ್ನಗಳು ನಡೆದಾಗ್ಯೂ ಒಡಕು ಇನ್ನೂ ಉಳಿದುಕೊಂಡಿದೆ. ಪ್ರವಾದನೆಯ ಪ್ರಕಾರ ಈ ಪರಿಸ್ಥಿತಿಯ ದೇವರು ತನ್ನ ಶಾಶ್ವತ ರಾಜ್ಯವನ್ನು ಸ್ಥಾಪಿಸುವವರೆಗೂ ಉಳಿಯುತ್ತದೆ.

**ಗುರುವಾರ** **ಜನವರಿ 16**

## ಬಂಡೆಗಲ್ಲು

ಓದಿರಿ : ದಾನಿಯೇಲ 2:34, 35, 44, 45. ನಮ್ಮ ಲೋಕದ ಅಂತಿಮ

ಗತಿಯ ಬಗ್ಗೆ ಈ ವಚನಗಳು ನಮಗೆ ಏನನ್ನು ಬೋಧಿಸುತ್ತದೆ? "ಮುಂದಿನ ದಿನಗಳಲ್ಲಿ" ಏನು ನಡೆಯುತ್ತದೆ ಎಂಬುದರ ಮೇಲೆ ಕನಸು ದೃಷ್ಟಿ ಹರಿಸಿದೆ (ದಾನಿ 2:28). ಲೋಹಗಳ (ಜೇಡಿ ಮಿಶ್ರಿತ) ರಾಜ್ಯಗಳು ಎಷ್ಟೇ ಅಧಿಕಾರ, ಸಂಪತ್ತುಗಳುಳ್ಳವುಗಳಾಗಿದ್ದಾಗ್ಯೂ ಅವುಗಳು ಕಲ್ಲಿನ ರಾಜ್ಯದ ಸ್ಥಾಪನೆಗೆ ಮುನ್ನುಡಿಯಾಗಿವೆ. ಸ್ವಲ್ಪಮಟ್ಟಿಗೆ ಲೋಹ ಮತ್ತು ಜೇಡಿಮಣ್ಣು ಮಾನವ ನಿರ್ಮಿತವಾದವುಗಳಾಗಿದ್ದಾಗ್ಯೂ ಕನಸಿನಲ್ಲಿ ಕಂಡ ಬಂಡೆಯು ಮನುಷ್ಯನ ಕೈಗಳಿಂದ ಮುಟ್ಟಲ್ಪಟ್ಟಿಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಹಿಂದಿನ ಪ್ರತೀ ರಾಜ್ಯಗಳು ಅಂತ್ಯಗೊಳ್ಳುತ್ತದೆಯಾದರೂ ಬಂಡೆಯ ಪ್ರತಿನಿಧಿಸುವ (ಸಂಕೇತಿಸುವ) ರಾಜ್ಯವು ಎಂದೆಂದಿಗೂ ಅಳಿಯದೆ ಉಳಿಯುತ್ತದೆ. 'ಬಂಡೆ' ರೂಪಕವು ಅನೇಕಾವರ್ತಿ ದೇವರನ್ನು ಸಂಕೇತಿಸುತ್ತದೆ (ಉದಾಹರಣೆಗೆ ಧ.ಕಾಂಡ 32:4 ಮತ್ತು 1 ಸಮುವೇಲ 2:2, ಕೀರ್ತಿ 18:31). ಅದೇ ರೀತಿ ಬಂಡೆಯ ಮೆಸ್ಸೀಯನನ್ನು ಪ್ರತಿನಿಧಿಸುತ್ತದೆ (ಕೀರ್ತ 118:22 ಮತ್ತು 1 ಪೇತ್ರ 2:4,7). ದೇವರ ಶಾಶ್ವತರಾಜ್ಯದ ಸ್ಥಾಪನೆಯನ್ನು ಬಂಡೆಗಿಂತಲೂ ಹೆಚ್ಚು ಸಮಂಜಸವಾಗಿ ಮತ್ತ್ಯಾವುದೂ ಸಂಕೇತಿಸಲಾರದು. ಕೆಲವರು ಯೇಸುಕ್ರಿಸ್ತನು ಮಾನವನ ಅವತಾರದಲ್ಲಿ ಭೂಮಿಯ ಮೇಲೆ ಸೇವೆ ಮಾಡಿದಾಗ ಸುವಾರ್ತೆಯ ಪ್ರಚಾರವು ಇಡೀ ಲೋಕವನ್ನು ಆವರಿಸಿದಾಗ ಬಂಡೆಗಲ್ಲಿನ ರಾಜ್ಯವು ಸ್ಥಾಪನೆಯಾಯ್ತು ಎಂದು ವಾದಿಸುತ್ತಾರೆ. ಆದರೆ ಕಲ್ಲಿನ ರಾಜ್ಯವು ನಾಲ್ಕು ಮುಖ್ಯವಾದ ರಾಜ್ಯಗಳ ಅಳಿದ ನಂತರ ಕಬ್ಬಿಣ ಮತ್ತು ಮಣ್ಣಿನ ಪಾದಗಳು ಸಂಕೇತಿಸುವ ರಾಜ್ಯವು ಛಿದ್ರವಾಗಿರುವ ಕಾಲದಲ್ಲಿ ಕಲ್ಲಿನ ರಾಜ್ಯವು ಅಸ್ತಿತ್ವಕ್ಕೆ ಬರುತ್ತದೆ. ಈ ಸಂಗತಿಯು ಒಂದನೇ ಶತಮಾನದಲ್ಲಿ ಯೇಸುಕ್ರಿಸ್ತನ ಸೇವಾಕಾಲದಲ್ಲಿ ನೆರವೇರಿತು ಎಂಬ ವಾದವನ್ನು ಅಲ್ಲಗಳೆಯುತ್ತದೆ. ಯಾಕೆಂದರೆ ಕ್ರಿಸ್ತನು ಭೂಮಿಯ ಮೇಲಿದ್ದಾಗನಾಲ್ಕನೇ ರಾಜ್ಯ ರೋಮ್ ಸಾಮ್ರಾಜ್ಯವು ಅಸ್ತಿತ್ವದಲ್ಲಿತ್ತು. ಈ ಬಂಡೆಯು ಪರ್ವತಕ್ಕೆ ದಾರಿ ಮಾಡಿಕೊಡುತ್ತದೆ.

ಪ್ರತಿಮೆಗೆ ಬಡಿದ ಆ ಬಂಡೆಯು ಮಹಾಪರ್ವತವಾಗಿ ಲೋಕದಲ್ಲೆಲ್ಲಾ ತುಂಬಿಕೊಂಡಿತು (ದಾನಿ 2:35). ಈ ತೆರನಾದ ಪರ್ವತವು ದೇವಾಲಯವು ನಿಂತಿರುವ ಚೀಯೋನ್ ಪರ್ವತದ ಆವ್ಹಾನೆಯಾಗಿದೆ, ಇದು ಹಳೆಯ

ಒಡಂಬಡಿಕೆಯ ಕಾಲದಲ್ಲಿ ಭೂಮಿಯ ಮೇಲೆ ದೇವರ ರಾಜ್ಯದಲ್ಲಿ ವಾಸ್ತವವಾದ ಪ್ರಾತಿನಿಧ್ಯವಾಗಿತ್ತು. ಪರ್ವತದಿಂದ ಕಡಿಯಲ್ಪಟ್ಟು ಬಂಡೆಯು ಪರ್ವತವೇ ಆಗಿ ಬೆಳೆದುದು ಆಸಕ್ತಿದಾಯಕವಾಗಿದೆ. ವಚನದ ಪ್ರಕಾರ ಈ ಪರ್ವತವು ಈಗಾಗಲೇ ಅಸ್ತಿತ್ವದಲ್ಲಿದ್ದು ಪರಲೋಕದ ದೇವದರ್ಶನ ಗುಡಾರವಿರುವ ಚೀಯೋನನ್ನು ತೋರಿಸುತ್ತದೆ. ಅಲ್ಲಿಂದಲೇ ಯೇಸುಕ್ರಿಸ್ತನು ತನ್ನ ಶಾಶ್ವತ ರಾಜ್ಯವನ್ನು ಸ್ಥಾಪಿಸಲು ಲೋಕಕ್ಕೆ ಬರುತ್ತಾನೆ. ಆಕಾಶದಿಂದ ಇಳಿದು ಬರುವ ಹೊಸ ಯೆರೂಸಲೇಮಿನಲ್ಲಿ ಭೂಮಿಯ ಮೇಲೆ ಸ್ಥಾಪಿತವಾಗುವ ರಾಜ್ಯ ಅಂತಿಮವಾದ ನೆರವೇರಿಕೆಯನ್ನು ಕಂಡುಕೊಳ್ಳುತ್ತದೆ.

ದಾನಿಯೇಲ 2ನೇ ಅಧ್ಯಾಯವು ನಾಲ್ಕು ರಾಜ್ಯಗಳವರೆಗೂ ಸರಿಯಾಗಿದೆ. ದೇವರ ಶಾಶ್ವತವಾದ ರಾಜ್ಯದ ಪ್ರವಾದನೆಯನ್ನು ನಂಬುವುದು ಬುದ್ಧಿವಂತಿಕೆಯೂ ತಾರ್ಕಿಕವೂ ಆಗಿದೆ ಏಕೆ? ಪ್ರವಾದನೆಯುನ್ನು ನಂಬದಿರುವುದು ವಿಚಾರಹೀನವಾಗಿದೆ ಏಕೆ?

**ಶುಕ್ರವಾರ** **ಜನವರಿ 17**

**ಹೆಚ್ಚಿನ ಚಿಂತನೆ :** ದಾನಿಯೇಲ 2ನೇ ಅಧ್ಯಾಯದಲ್ಲಿರುವ ಪ್ರತಿಮೆಯು ಬಂಗಾರ ಮತ್ತು ಬೆಳ್ಳಿಯದ್ದಾಗಿದ್ದು ಬೋಧಪ್ರದವಾಗಿದೆ. ಈ ಲೋಹಗಳು ಆರ್ಥಿಕ ಬಲಕ್ಕೆ ಸಂಬಂಧಿಸಿದವುಗಳಾಗಿವೆ. ಪ್ರತಿಮೆಯು ತಾಮ್ರ ಕಬ್ಬಿಣ ಮತ್ತು ಮಣ್ಣಿನದಾಗಿದ್ದು, ಈ ಲೋಹಗಳನ್ನು ಪ್ರಾಚೀನ ಕಾಲದಲ್ಲಿ ಸಾಹಿತ್ಯಕ್ಕೂ ಮನೆ ಬಳಕೆಯ ಉಪಕರಣಗಳಿಗೂ ಉಪಯೋಗಿಸುತ್ತಿದ್ದರು. ಹಾಗಾಗಿ ಪ್ರತಿಮೆ ಮಾನವತೆ ಮತ್ತು ಅದರ ಸಾಧನೆಯನ್ನು ಚಿತ್ರಿಸುತ್ತದೆ. ಪ್ರತಿಮೆಯ ವಿವಿಧ ಅಂಗ ಭಾಗಗಳು ವಿವಿಧ ರಾಜ್ಯಗಳ ಅಧಿಕಾರಕ್ಕೆ ಬರುವುದನ್ನು ಮತ್ತು ಕಡೆಯಿಂದಾಗಿ ಬೇರೆ ಬೇರೆ ದೇಶಗಳು ಒಂದಾಗದೆ ಪ್ರತ್ಯೇಕವಾಗಿ ಉಳಿಯುವ ಮಾನವನ ಚರಿತ್ರೆಯ ಕಡೆಯ ದಿನಗಳನ್ನು ಪ್ರತಿಬಿಂಬಿಸುತ್ತದೆ. ಈ ಬಂಡೆಯು 'ಮಾನವ ಕೈಗಳು' ಮಾಡದುದನ್ನು (ದಾನಿ 2:45), ಪ್ರಾಕೃತಿಕ (ಅಲೌಕಿಕ) ಅಂತ್ಯವು ತಾತ್ಕಾಲಿಕವಾದ ಲೋಕವನ್ನು ಮತ್ತು ಜನರ ಸಾಧನೆಗಳಿಗೆ ಬರುವುದನ್ನು ಸ್ಪಷ್ಟವಾಗಿ ವಿವರಿಸುತ್ತದೆ.

ಮಾನವನ ಬರೀಗಣ್ಣುಗಳಿಗೆ ಲೋಕದ ಚರಿತ್ರೆಯು ಶಕ್ತಿ ಮತ್ತು ಪ್ರತಿಶಕ್ತಿಗಳ ನಡುವೆ ನಡೆಯುವ ಅಸ್ತವ್ಯಸ್ತವಾದ ಆಟದಂತೆ ಕಾಣಿಸುತ್ತದೆ.... ಇವುಗಳ ಹಿಂದೆ ದೇವರು ನಿಂತಿದ್ದಾನೆಂದು ಅವುಗಳನ್ನು ನೋಡಿ ಉತ್ತಮವಾದದನ್ನು ಸಾಧಿಸಲು ಅವುಗಳೊಳಗೆ ಚಲಿಸುತ್ತಾನೆಂದು ದಾನಿಯೇಲನು ಖಾತ್ರಿಪಡಿಸುತ್ತಾನೆ. ವಿಲಿಯಂ ಹೆಚ್.ಎಸ್.ರ ದಾನಿಯೇಲ ಎ ರೀಡರ್ಸ್ ಗೈಡ್ ಪುಟ 98.

## ಚರ್ಚಿಸಬೇಕಾದ ಪ್ರಶ್ನೆಗಳು

1. ಲೋಕದ ಎಲ್ಲಾ ಅಸ್ತವ್ಯಸ್ತತೆಗಳ ಮತ್ತು ಕಷ್ಟಗಳ ನಡುವೆಯೂ ದೇವರು ಇವುಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಎಲ್ಲದಕ್ಕೂ ಮಹಿಮಾಯುತವಾದ ಅಂತ್ಯವನ್ನು ತರುತ್ತಾನೆಂದು ಅರಿಯುವುದು ಎಷ್ಟು ಒಳ್ಳೆಯದು? ಈ ಪಾಪಪೂರಿತ ಲೋಕದಲ್ಲಿ ಇರುವ ಕಷ್ಟಗಳನ್ನು ಪರಿಹರಿಸಲು ಒಳ್ಳೆಯದನ್ನು ಮಾಡುವವರಾಗಿ ನಾವು ವಹಿಸಬೇಕಾದ ಪಾತ್ರವೇನು?

2. ದಾನಿಯೇಲನ ಸ್ವಂತ ಜನರಿಗೆ ಬಹಳ ಹಾನಿಯನ್ನು ಮಾಡಿದ ಅನ್ಯಧರ್ಮೀಯ ನಾಯಕನಿಗೆ ದಾನಿಯೇಲನು ನಿಷ್ಠೆಯುಳ್ಳವನಾಗಿ ಅವನಿಗೆ ಬಹಳ ಸಮೀಪವಾಗಿ ಕೆಲಸ ಮಾಡುವುದನ್ನು ಹೇಗೆ ವಿವರಿಸುವಿರಿ?

3. ಯಾರ ಕೈಯಿಂದಲೂ ಕತ್ತಿರಿಸಲ್ಪಡದ ಬಂಡೆಯು ಇಡೀ ಲೋಕಕ್ಕೆ ಸುವಾರ್ತೆಯು ಸಾರುವುದನ್ನು ಉಲ್ಲೇಖಿಸುತ್ತದೆಂದು ಕೆಲವರು ವಾದಿಸುವುದನ್ನು ನೋಡುವಾಗ ಇದು ಅನೇಕ ಕಾರಣಗಳಿಂದ ದಾನಿಯೇಲ 2:35 ಕೊಡುವ ಕಾರಣವು ಸೇರಿ ಸರಿಯಾಗಿರಲು ಸಾಧ್ಯವಿಲ್ಲ.

   "ಆಗ ಕಬ್ಬಿಣ ಮಣ್ಣು ತಾಮ್ರ ಬೆಳ್ಳಿ ಬಂಗಾರಗಳೆಲ್ಲವೂ ಪುಡಿಪುಡಿಯಾಗಿ ಸುಗ್ಗಿಯ ಕಣಗಳ ಹೊಟ್ಟಿನಂತಾದವು; ಗಾಳಿಯು ತೂರಿಕೊಂಡು ಹೋಗಲು ಅವುಗಳಿಗೆ ನೆಲೆಯೇ ಇಲ್ಲವಾಯಿತು" ಎಂದು ವಾಕ್ಯವು ಹೇಳುತ್ತದೆ. ಇದು ಶಿಲುಬೆಯ ನಂತರ ಹೀಗೆ ನಡೆಯಲಿಲ್ಲ. ಮತ್ತೆ ಕೆಲವರು ಕಲ್ಲಿನ ಸಾಮ್ರಾಜ್ಯವನ್ನು ದೇವರ ಸಭೆಯೊಂದಿಗೆ ಗುರುತಿಸಲು ಪ್ರಯತ್ನಿಸುವ ಮತ್ತೆ ಕೆಲವರು ಈ ಸಾಮ್ರಾಜ್ಯವು ಮನುಷ್ಯನ ಇತರ ರಾಜ್ಯಗಳನ್ನೆಲ್ಲಾ ಸ್ಥಳಾಂತರಿಸುತ್ತದೆಂಬುದನ್ನು ಅರಿಯಲು ಸೋತಿದ್ದಾರೆ? ಈ ಸಾಮ್ರಾಜ್ಯವು

ಇಡೀ ಲೋಕವನ್ನೇ ಆವರಿಸಿಕೊಳ್ಳುತ್ತದೆ. ಆದುದರಿಂದ ಯೇಸುಕ್ರಿಸ್ತನ ಎರಡನೇ ಬರೋಣವು ಈ ಪ್ರವಾದನೆಯ ಕನಸು ನೆರವೇರುವ ಪರಾಕಾಷ್ಠತೆಯನ್ನು ಚಿತ್ರಿಸುತ್ತದೆ. ಅಂತ್ಯದಿನಗಳಲ್ಲಿ ಕಲ್ಲು ಮಾಡುವ ಕೆಲಸವು ಕ್ರಿಸ್ತನ ಎರಡನೇ ಬರೋಣದಲ್ಲಿ ಆಗುತ್ತದೆಂಬುದು ಯಾಕೆ ವಿವೇಚನೆಯುಳ್ಳ ವ್ಯಾಖ್ಯಾನವಾಗಿದೆ?